# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 28
2. ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ
3. ಉತ್ತರಿಸುವ ಸಚಿವರು : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು.
4. ಉತ್ತರಿಸುವ ದಿನಾಂಕ : 09.07.2018.

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ರಾಜ್ಯದಲ್ಲಿರುವ ಸರ್ಕಾರಿ ಕಾನೂನು ಕಾಲೇಜುಗಳ ಸಂಖ್ಯೆ ಎಷ್ಟು; ಎಷ್ಟು ವಿದ್ಯಾರ್ಥಿಗಳು 2016-17, 2017-2018 ರಲ್ಲಿ ಪ್ರವೇಶ ಪಡೆದಿದ್ದಾರೆ; | ಕರ್ನಾಟಕ ರಾಜ್ಯದಲ್ಲಿರುವ ಸರ್ಕಾರಿ ಕಾನೂನು ಕಾಲೇಜುಗಳ ಸಂಖ್ಯೆ :05<br><br>2016-17, 2017-2018 ರಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. |
| (ಆ) | ರಾಜ್ಯದಲ್ಲಿ ಕಾನೂನು ವಿಶ್ವವಿದ್ಯಾಲಯಗಳು ಯಾವುದೇ ಮೂಲಭೂತ ಸೌಕರ್ಯಗಳಿಲ್ಲದೆ ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಇಲಾಖೆ ಕೈಗೊಂಡಿರುವ ಕ್ರಮಗಳೇನು; ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು; (ವಿವರ ಒದಗಿಸುವುದು) | ಹುಬ್ಬಳ್ಳಿಯಲ್ಲಿನ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದ್ದು, ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ.<br><br>ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿಯಲ್ಲಿನ ಖಾಲಿ ಇರುವ ಹುದ್ದೆಗಳ ವಿವರಗಳನ್ನು ಅನುಬಂಧ-3 ರಲ್ಲಿ ಒದಗಿಸಲಾಗಿದೆ. |
| (ಇ) | ರಾಜ್ಯದಲ್ಲಿ ನ್ಯಾಷನಲ್ ಲಾ ಸ್ಕೂಲ್ ಮಾದರಿಯಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಸಂಸ್ಥೆಗಳನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; | ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

| | | |
|---|---|---|
| (ಈ) | ರಾಜ್ಯದಲ್ಲಿ ಕಾನೂನು ಶಿಕ್ಷಣ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ವಿವರ ಒದಗಿಸುವುದು); ಕಾನೂನು ಪದವೀಧರರಿಗೆ ಉದ್ಯೋಗ ಮತ್ತು ನ್ಯಾಯಾಲಯಗಳಲ್ಲಿ ವಾದಿಸಲು ತರಬೇತಿಗಳನ್ನು ನೀಡಲಾಗುತ್ತಿದೆಯೇ; ರಾಜ್ಯದಲ್ಲಿ ಕಾನೂನು ಶಿಕ್ಷಣದ ಬೇಡಿಕೆ ಬಗ್ಗೆ ಇಲಾಖೆ ಚರ್ಚೆ ನಡೆಸಿದೆಯೇ? | ಕಾನೂನು ಶಿಕ್ಷಣ ಓದುತ್ತಿರುವ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ :25325.<br>ವಿವರಗಳನ್ನು ಅನುಬಂಧ-4 ರಲ್ಲಿ ಒದಗಿಸಲಾಗಿದೆ.<br><br>ಕಾನೂನು ಪದವೀಧರರಿಗೆ ಉದ್ಯೋಗ ಮತ್ತು ನ್ಯಾಯಾಲಯಗಳಲ್ಲಿ ವಾದಿಸಲು ವಿಶ್ವವಿದ್ಯಾಲಯದಲ್ಲಿ ಈ ಕೆಳಗೆ ನಮೂದಿಸಿದ ತರಬೇತಿಗಳನ್ನು ನೀಡಲಾಗುತ್ತಿದೆ.<br>▪ Students undertake Internship after completion of each Semester<br>▪ Moot Court Competition (State & National Level)<br>▪ Client Interviewing and Counseling Competition<br>▪ Career Guidance Training for final year students.<br>▪ Model Parliament Competition |

ಸಂಖ್ಯೆ: ಲಾ 48 ಹೆಚ್‌ಆರ್‌ಎಮ್ 2018

(ಕೃಷ್ಣ ಬೈರೇಗೌಡ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು

## ಅನುಬಂಧ–1

**ಕರ್ನಾಟಕ ರಾಜ್ಯದಲ್ಲಿರುವ ಸರ್ಕಾರಿ ಕಾನೂನು ಕಾಲೇಜುಗಳ ಸಂಖ್ಯೆ ಹಾಗೂ 2016–17, 2017–18ರಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಮಾಹಿತಿ.**

| ಕ್ರ.ಸಂ. | ಸರ್ಕಾರಿ ಕಾಲೇಜುಗಳು | 2016–17 | 2017–18 |
|---|---|---|---|
| 1 | ಸರ್ಕಾರಿ ಕಾನೂನು ಮಹಾವಿದ್ಯಾಲಯ, ರಾಮನಗರ | 60 | 28 |
| 2 | ಸರ್ಕಾರಿ ಕಾನೂನು ಮಹಾವಿದ್ಯಾಲಯ, ಕೋಲಾರ | 60 | 60 |
| 3 | ಸರ್ಕಾರಿ ಕಾನೂನು ಮಹಾವಿದ್ಯಾಲಯ, ಹೊಳೆನರಸೀಪುರ | 94 | 95 |
| 4 | ಸರ್ಕಾರಿ ಕಾನೂನು ಮಹಾವಿದ್ಯಾಲಯ, ಹಾಸನ | 59 | 59 |
| 5 | ವಿಜ್ಞಾನೇಶ್ವರ ಸರ್ಕಾರಿ ಕಾನೂನು ಮಹಾವಿದ್ಯಾಲಯ, ಕಲಬುರಗಿ | 79 | 70 |

ಸಂಖ್ಯೆ: ಲಾ 48 ಹೆಚ್‌ಆರ್‌ಎಮ್ 2018

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಾನೂನು ಇಲಾಖೆ (ಮಾನವ ಹಕ್ಕುಗಳು).

## ಅನುಬಂಧ–2

## ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯಕ್ಕೆ ಒದಗಿಸಿರುವ ಮೂಲಭೂತ ಸೌಕರ್ಯಗಳ ವಿವರ

| ಕ್ರ.ಸಂ. | ಕಾಮಗಾರಿಗಳ ಹೆಸರು | ವೆಚ್ಚ (ರೂ. ಲಕ್ಷಗಳಲ್ಲಿ) | ಷರಾ |
|---|---|---|---|
| 1 | ಕಾನೂನು ಶಾಲೆ ಕಟ್ಟಡ | 1869.69 | ಕಟ್ಟಡ ಪೂರ್ಣಗೊಂಡಿದ್ದು ದಿನಾಂಕ: 10.03.2018ರಂದು ಮಾನ್ಯ ಕಾನೂನು ಸಚಿವರಿಂದ ಉದ್ಘಾಟನೆಗೊಂಡಿರುತ್ತದೆ. ಕಟ್ಟಡದಲ್ಲಿ ಒಳವಿನ್ಯಾಸ ಕಾಮಗಾರಿಗಾಗಿ ರೂ.231.00 ಲಕ್ಷಗಳನ್ನು ಹಾಗೂ Site and Services ಕಾಮಗಾರಿಗಳಿಗಾಗಿ ರೂ.282.00 ಲಕ್ಷಗಳ ಅನುದಾನವನ್ನು ಬಿಡುಗಡೆಮಾಡುವಂತೆ ವಿಶ್ವವಿದ್ಯಾಲಯವು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. |
| 2 | ಅತಿಥಿ ಗೃಹ ಕಟ್ಟಡ | 173.13 | ಕಟ್ಟಡ ಪೂರ್ಣಗೊಂಡಿದ್ದು ದಿನಾಂಕ: 10.03.2018ರಂದು ಕಾನೂನು ಸಚಿವರಿಂದ ಉದ್ಘಾಟನೆಗೊಂಡಿರುತ್ತದೆ. |
| 3 | ತರಬೇತಿ ವಸತಿ ನಿಲಯ ಕಟ್ಟಡ (Training Hostel) | 90.00 | ಕಟ್ಟಡ ಪೂರ್ಣಗೊಂಡಿದ್ದು, ಪ್ರಸ್ತುತ ಕಟ್ಟಡವನ್ನು ಕಾನೂನು ಶಾಲೆಯ ವಿದ್ಯಾರ್ಥಿಗಳ ವಸತಿಗಾಗಿ ಉಪಯೋಗಿಸಲಾಗುತ್ತಿದೆ. |
| 4 | ಬಾಲಕರ ವಸತಿ ನಿಲಯ ಕಟ್ಟಡ | 1050.00 | ಈ ಕಾಮಗಾರಿಗಳು ಪ್ರಗತಿಯಲ್ಲಿವೆ. |
| 5 | ಕುಲಪತಿಯವರ ವಸತಿ ಗೃಹ ಕಟ್ಟಡ | 176.00 | |
| 6 | ಕುಲಸಚಿವರ (ಆಡಳಿತ) ವಸತಿ ಗೃಹ ಕಟ್ಟಡ | 174.00 | |
| 7 | ಕುಲಸಚಿವರ (ಮೌಲ್ಯಮಾಪನ) ವಸತಿ ಗೃಹ ಕಟ್ಟಡ | 174.00 | |
| 8 | ಬೋಧಕ ಸಿಬ್ಬಂದಿಗಳ ವಸತಿ ಗೃಹ ಕಟ್ಟಡ | 469.00 | |

ಸಂಖ್ಯೆ: ಲಾ 48 ಹೆಚ್‌ಆರ್‌ಎಮ್ 2018

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಾನೂನು ಇಲಾಖೆ (ಮಾನವ ಹಕ್ಕುಗಳು).

## ಅನುಬಂಧ-3

### ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದಲ್ಲಿನ ಖಾಲಿ ಹುದ್ದೆಗಳ ವಿವರ

| ಬೋಧಕ | | | ಬೋಧಕೇತರ | | |
|---|---|---|---|---|---|
| ಮಂಜೂರಾದ ಹುದ್ದೆ | ಭರ್ತಿಮಾಡಿದ ಹುದ್ದೆ | ಖಾಲಿ ಹುದ್ದೆ | ಮಂಜೂರಾದ ಹುದ್ದೆ | ಭರ್ತಿಮಾಡಿದ ಹುದ್ದೆ | ಖಾಲಿ ಹುದ್ದೆ |
| 68 | 11 | 57 | 63 | ನೇಮಕಾತಿ ಪ್ರಕ್ರಿಯೆ ಚಾಲ್ತಿ ಯಲ್ಲಿದೆ. ಪ್ರಸ್ತುತ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಗೊಂಡ ಸಿಬ್ಬಂದಿಗಳಿಂದ ಸೇವೆ ಪಡೆಯಲಾಗುತ್ತಿದೆ. | |

## ಅನುಬಂಧ-4

### 2017-18ನೇ ಸಾಲಿಗೆ ರಾಜ್ಯದಲ್ಲಿ ಕಾನೂನು ಶಿಕ್ಷಣ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ:

| ಕೋರ್ಸ್ | ಎಸ್.ಸಿ. | ಎಸ್.ಟಿ. | ಒಬಿಸಿ | ಸಾಮಾನ್ಯ | ಒಟ್ಟು |
|---|---|---|---|---|---|
| ಯು.ಜಿ. (3 ವರ್ಷದ ಮತ್ತು 5 ವರ್ಷದ ಕಾನೂನು ಪದವಿ) | 4158 | 1052 | 11499 | 8421 | 25130 |
| ಪಿ.ಜಿ. (ಎರಡು ವರ್ಷದ ಎಲ್‌ಎಲ್.ಎಂ ಪದವಿ) | 21 | 2 | 19 | 14 | 56 |
| ಪಿಹೆಚ್.ಡಿ. | 4 | 4 | 15 | 23 | 46 |
| ಪಿ.ಜಿ. ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್ | 2 | 1 | 42 | 48 | 93 |
| **ಒಟ್ಟು** | **4185** | **1059** | **11575** | **8506** | **25325** |

ಸಂಖ್ಯೆ: ಲಾ 48 ಹೆಚ್‌ಆರ್‌ಎಮ್ 2018

(ಕೆ.ಸಾವಿತ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಾನೂನು ಇಲಾಖೆ (ಮಾನವ ಹಕ್ಕುಗಳು).